## ಜಪಸರ ಸರಪಳಿ (೨೦೧೯-೨೦೨೦)

ಬಂಗಾಳಕೊಲ್ಲಿಯ ಕರಾವಳಿ ಪ್ರದೇಶದಲ್ಲಿರುವ ನಿಷ್ಕಳಂಕ ಮಾತೆಯ ದೇಗುಲವಾದ ವಿಶಾಖಪುರಿ ಮಾತೆ ಮರಿಯಳ ದೇವಾಲಯವು ಶತಮಾನಗಳಿಂದ ಒಂದು ಆಧ್ಯಾತ್ಮಿಕವಾದ ಕೇಂದ್ರವಾಗಿದೆ. ೨೫ ವರ್ಷಗಳ ಹಿಂದೆ ಅಂದರೆ ೧೯೯೫ ರಲ್ಲಿ ಪವಿತ್ರಾತ್ಮರಿಂದ ಪ್ರೇರಿತರಾಗಿ ಜಪಸರ ಸರಪಳಿ ಪ್ರಾರ್ಥನೆಯನ್ನು ರೋಸ್ ಹಿಲ್ ಪ್ರಾರ್ಥನಾ ತಂಡವು ಮೇರಿಯನ್ ಶ್ರೈನಲ್ಲಿ ಪ್ರಾರಂಭಿಸಿದರು. ಜಪಸರ ಸರಪಳಿಯ ಬೆಳ್ಳಿ ಮಹೋತ್ಸವದ ಈ ವರ್ಷದಲ್ಲಿ ಕನ್ಯಾಮರಿಯಮ್ಮನವರ ಜಪಸರ ಸರಪಳಿ ಪ್ರಾರ್ಥಿಸಿ ಸ್ಥಿರವಾಗಿ ಈ ಪ್ರಾರ್ಥನಾ ಅಭಿಯಾನದಲ್ಲಿ ಅನುಭವಿಸಿದ ಆತ್ಮಿಕ ಬೆಳವಣಿಗೆಗೆ ನಾವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಕನ್ಯಾಮರಿಯಮ್ಮನವರ ಪವಿತ್ರ ಪ್ರಾಂತ್ಯವು ಭಕ್ತಾಧಿಗಳಿಗೆ ಪರಿಶುದ್ಧ ಕನ್ಯಾಮಾತೆಯ ಜಪಸರದ ರಹಸ್ಯಗಳ ಬಗ್ಗೆ ಧ್ಯಾನಿಸಲು ಮತ್ತು ಸ್ವರ್ಗೀಯ ಅನುಭವವನ್ನು ಪಡೆಯಲು ಅಧ್ಯಾತ್ಮಿಕ ವಾತಾವರಣವನ್ನು ಒದಗಿಸಿದೆ. ವಿಶಾಖ ಪಟ್ಟಣದ ಅಂದಿನ ಮಹಾಧರ್ಮಾಧ್ಯಕ್ಷರಾದ ಅ। ವಂ। ಡಾ। ಮರಿಯದಾಸ್, ಒಖಊಖ ಹಾಗೂ ಪ್ರಸ್ತುತ ಮಹಾಧರ್ಮಾಧ್ಯಕ್ಷರಾದ ಅ। ವಂ। ಡಾ। ಎಮ್ ಪ್ರಕಾರ ನಿರಂತರ ಪ್ರೋತ್ಸಾಹ ಹಾಗೂ ಈ ಪ್ರಾರ್ಥನಾ ಅಭಿಯಾನದ ಮೇಲೆ ಇವರ ಆಶೀರ್ವಾದಕ್ಕಾಗಿ ನಾವು ಅವರಿಗೆ ಚಿರಋಣಿಯಾಗಿದ್ದೇವೆ. ಈ ಅಭಿಯಾನದ ನೇತೃತ್ವವನ್ನು ವಹಿಸಿದ ಇದರ ಮಂಚೂಣಿ ಸದಸ್ಯರ ನಿಸ್ವಾರ್ಥ ಮತ್ತು ಶ್ರಮದಾಯಕ ಸೇವೆಯನ್ನು ನಾವು ಪ್ರಶಂಸಿಸಿ ಅಂಗೀಕರಿಸುತ್ತೇವೆ. ಅಸಂಖ್ಯಾತ ಧರ್ಮಗುರುಗಳು, ಧರ್ಮಭಗಿನಿಯರು ಮತ್ತು ಸಮಸ್ತ ಶ್ರೀ ಸಾಮಾನ್ಯ ವಿಶ್ವಾಸಿ ಭಕ್ತರು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಇದನ್ನು ಇತರರಿಗೂ ಸಾರಿದ್ದಾರೆ. ನಾವು ಅವರಿಗೆ ಕೃತಜ್ಞರಾಗಿದ್ದೇವೆ.

### ಯಾಕೆ ನಾವು ಜಪಸರವನ್ನು ಪ್ರಾರ್ಥಿಸಬೇಕು?

ನಾವು ಪ್ರಾಪಂಚಿಕತರೆ, ಗ್ರಾಹಕೀಕರಣ, ಭಿನ್ನಾಭಿಪ್ರಾಯ, ಮಾರಕ ಕಾಯಿಲೆಗಳು, ಮಾನಸಿಕ ಹುಚ್ಚುತನ, ಅಭದ್ರತೆ, ಭಯೋತ್ಪಾದನೆ, ಪರಿಸರ ಅಸಮತೋಲನ, ಮುರಿದ ಕುಟುಂಬಗಳು, ಅಸಡ್ಡೆ ಮಕ್ಕಳು, ಬೇಜವಾಬ್ದಾರಿ ನಾಗರಿಕರು ಮತ್ತು ಮಾನವ, ನೈತಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳ ಕೊರತೆಯಿಂದ ಕೂಡಿದ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆ. ಜನರು ತಮ್ಮ ಹೃದಯ, ಕುಟುಂಬಗಳು, ಸಮುದಾಯಗಳು ಮತ್ತು ಸಮಾಜದಲ್ಲಿ ಶಾಂತಿಯನ್ನು ಹುಡುಕುತ್ತಾ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಓಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಜಗತ್ತಿಗೆ ದೈವಿಕ ಅನುಗ್ರಹದ ಅವಶ್ಯಕತೆಯಿದೆ. ಜಪಸರವು ದುಃಖದಿಂದ ಬಳಲುತ್ತಿರುವ ಜಗತ್ತಿಗೆ ಉತ್ತರವನ್ನು ಹೊಂದಿದೆ. ಜಪಸರವನ್ನು ಪ್ರಾರ್ಥಿಸುವುದರಿಂದ ಆತ್ಮಗಳನ್ನು ದೇವರಿಗೆ ಹತ್ತಿರವಾಗಿಸಲು ಸಹಾಯ ಮಾಡುತ್ತದೆ ಮತ್ತು ನಮ್ಮನ್ನು ಪಾಪದಿಂದ ದೂರವಿರುಸುತ್ತದೆ. ಇದು ನಮ್ಮ ಮಧ್ಯ ದೇವರ ರಾಜ್ಯವನ್ನು ತರುತ್ತದೆ. ಇದು ನಮ್ಮನ್ನು ವಿಶ್ವಾಸದ ಪ್ರಯಾಣದಲ್ಲಿ ದಾರಿ ತಪ್ಪಲು ಬಿಡದೆ, ಸ್ವರ್ಗದ ಹಾದಿಯಲ್ಲಿ ಕರೆದೊಯ್ಯುತ್ತದೆ. ದೇವರ ತಾಯಿ ಮೇರಿ, ಕುಟುಂಬಗಳು, ಸಮುದಾಯಗಳು ಮತ್ತು ಧರ್ಮನಿಷ್ಠ ಗುಂಪುಗಳಲ್ಲಿ ಜಪಸರ ಪ್ರಾರ್ಥಿಸುವ ತನ್ನ ಮಕ್ಕಳಿಗಾಗಿ ಯಾವಾಗಲು ವಿನಂತಿಸುತ್ತಾಳೆ. ಶುದ್ಧಲೋಕದ ಆತ್ಮಗಳನ್ನು ಬಿಡುಗಡೆ ಮಾಡಲು ಯೇಸುವಿನ ಪವಿತ್ರ ಹೃದಯಕ್ಕೆ ಸಮರ್ಪಿಸಲು ಸಹಾಯ ಮಾಡುತ್ತದೆ. ಹೀಗಾಗಿ, ಜಪಸರವನ್ನು ಧರ್ಮನಿಷ್ಠವಾಗಿ ಪಠಿಸುವುದು ಅತೀ ಅವಶ್ಯಕ ಎಂದು ನಾವು ಹೇಳಬಹುದು.

ನಾವು ಜಪಸರ ಸರಪಳಿಯ ಬೆಳ್ಳಿ ಮಹೋತ್ಸವದ ವರ್ಷವನ್ನು ಆಚರಿಸುತ್ತಿರುವಾಗ ಜಗದ್ಗುರುಗಳಾದ ಸಂತ ಜಾನ್ ಪಾಲ್॥ ರವರು ಹೇಳಿದ ಮಾತು, "ಜಪಸರವು ಸಮಾಜದ ದುಷ್ಟರ ವಿರುದ್ಧ ಪರಿಣಾಮಕಾರಿ ಅಧ್ಯಾತ್ಮಿಕ ಅಸ್ತ್ರವಾಗಿದೆ" ಮತ್ತು ಜಗದ್ಗುರುಗಳಾದ ಸಂತ ಪಿಯುಸ್ XII ರವರ ಪ್ರಕಾರ "ನೀವು ಜಪಸರವನ್ನು ಒಟ್ಟಿಗೆ ಪ್ರಾರ್ಥಿಸಿದರೆ ನಿಮ್ಮ ಕುಟುಂಬದಲ್ಲಿ ಶಾಂತಿಯನ್ನು ಅನುಭವಿಸುವಿರಿ. ನೀವು ಒಟ್ಟಿಗೆ ಇರುತ್ತೀರಿ" ಎಂಬ ಮಾತುಗಳನ್ನು ನೆನಪಿಸಿಕೊಳ್ಳೋಣ, ಆದ್ದರಿಂದ, ಈ ಪ್ರಬಲ ಆಧ್ಯಾತ್ಮಿಕ ಆಂದೋಲವನ್ನು ನಾವು ಭೇಟಿಯಾದ ಎಲ್ಲರಿಗೂ ಹೊಸ ಉತ್ಸಾಹದಿಂದ ಹರಡೋಣ. ಪವಿತ್ರ ಜಪಸರದ ಆಧ್ಯಾತ್ಮಿಕ ಪ್ರಯೋಜನಗಳಾದ ಕುಟುಂಬದಲ್ಲಿ ಶಾಂತಿ ಏಕತೆ ಮತ್ತು ಸಾಮರಸ್ಯವನ್ನು ನಾವು ಅವರಿಗೆ ತಿಳಿಸೋಣ.

### ಜಪಸರ ಸರಪಳಿಯನ್ನು ಹೇಗೆ ಪಠಿಸುವುದು?

ನಿಮ್ಮ ಸ್ಥಳದಲ್ಲಿ ಜಪಸರ ಪ್ರಾರ್ಥಿಸಲು ಹಗಲು ಅಥವಾ ರಾತ್ರಿಯ ಯಾವುದೇ ಸೂಕ್ತ ಸಮಯವನ್ನು ಆರಿಸಿ, ಪವಿತ್ರ ಜಪಸರಕ್ಕೆ ಸಮರ್ಪಿಸಲಾಗಿರುವ ಅಕ್ಟೋಬರ್ ತಿಂಗಳಲ್ಲಿ ಈ ಸಮಯವನ್ನು ಪ್ರತಿದಿನ ಪಾಲಿಸಿ. ಕೊಟ್ಟಿರುವ ಉದ್ದೇಶಕ್ಕಾಗಿ ಪ್ರತಿ ಹತ್ತು ಮಣಿ ಪ್ರಾರ್ಥಿಸಿ. ಪ್ರತ್ಯೇಕವಾಗಿ ಅಥವಾ ಕುಟುಂಬವಾಗಿ ಅಥವಾ ಗುಂಪಾಗಿ ಪ್ರಾರ್ಥಿಸಿ. ಈ ಪ್ರಾರ್ಥನೆಯ ಸಮಯವನ್ನು ಸೆಪ್ಟೆಂಬರ್ ಅಂತ್ಯದ ವೇಳೆಗೆ ಪೋಸ್ಟ್ ಅಥವಾ ಇಮೇಲ್ ಮೂಲಕ ನಮಗೆ ತಿಳಿಸಿ. ಹೀಗೆ ನಾವು ಧರ್ಮಸಭೆ ಮತ್ತು ಪ್ರಪಂಚದ ತುರ್ತು ಅಗತ್ಯಗಳಿಗಾಗಿ ಹಗಲು ರಾತ್ರಿ ಪ್ರಾರ್ಥಿಸಲು ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟುಗೂಡುತ್ತೇವೆ.

### ರೋಸ್‌ಹಿಲ್‌ನಲ್ಲಿ ಪವಿತ್ರ ಜಪಸರದ ಹಬ್ಬ

ಅಕ್ಟೋಬರ್ ೧೯೯೫ ರಲ್ಲಿ ನಾವು ಜಪಸರ ಸರಪಳಿ ಪ್ರಾರ್ಥನೆಯನ್ನು ಪ್ರಾರಂಭಿಸಿದಾಗ ನಾವು ಜಪಮಾಲೆಯ ರಾಣಿಯನ್ನು ನಮ್ಮ ಪೋಷಕರಾಗಿ ಆಯ್ಕೆ ಮಾಡಿದ್ದೇವೆ. ಅಂದಿನಿಂದ ನಾವು ಅಕ್ಟೋಬರ್ ೭ ರಂದು ವಿಶಾಖಪಟ್ಟಣದ ರೋಸ್‌ಹಿಲ್‌ನಲ್ಲಿ ಅವರ್ ಲೇಡಿ ಆಫ್ ಹೋಲಿ ರೋಸರಿ (ಜಪಸರ ಮಾತೆ) ಹಬ್ಬವನ್ನು ಒಂದು ದಿನದ ಮಾತೆ ಮರಿಯಳ ಸಮಾವೇಶದೊಂದಿಗೆ ಆಚರಿಸುತ್ತಿದ್ದೇವೆ. ಈ ವರ್ಷ "ಜಪಸರ ಸರಪಳಿ ಪ್ರಾರ್ಥನೆಯ ಬೆಳ್ಳಿ ಮಹೋತ್ಸವದ ವರ್ಷ". ನಾವು ರೋಸ್ ಹಿಲ್‌ನಲ್ಲಿ ಅಕ್ಟೋಬರ್ ೫, ೬ ಮತ್ತು ೭ ರಂದು ಮೂರು ದಿನಗಳ ಮಾತೆ ಮರಿಯಳ ಸಮಾವೇಶವನ್ನು ಏರ್ಪಡಿಸಿದ್ದೇವೆ. ಜಪಸರ ಮಾತೆಯ ಮಧ್ಯಸ್ಥಿಕೆಯ ಮೂಲಕ ಈ ಸಮಾವೇಶದಲ್ಲಿ ಭಾಗವಹಿಸಲು ಮತ್ತು ದೇವರ ಆಶೀರ್ವಾದವನ್ನು ಸ್ವೀಕರಿಸಲು ನಾವು ಎಲ್ಲರನ್ನೂ ಸೌಹಾರ್ದಯುತವಾಗಿ ಸ್ವಾಗಿಸುತ್ತೇವೆ. ಮಾತೆ ಮರಿಯಳ ಸಮಾವೇಶದ ವಿವರಗಳು ಈ ಕೆಳಗಿನಂತಿವೆ :

ಅಕ್ಟೋಬರ್ ೫ – ಶನಿವಾರ – ತೆಲಗು ಭಾಷೆಯಲ್ಲಿ ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೩ ರವರೆಗೆ ಸಮಾವೇಶ

ಅಕ್ಟೋಬರ್ ೬ – ಭಾನುವಾರ – ಇಂಗ್ಲೀಷ್ ಭಾಷೆಯಲ್ಲಿ ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೩ ರವರೆಗೆ ಸಮಾವೇಶ

ಅಕ್ಟೋಬರ್ ೭ – ಸೋಮವಾರ – ತೆಲಗು ಭಾಷೆಯಲ್ಲಿ ಬೆಳಗ್ಗೆ ೧೦ ರಿಂದ ಸಂಜೆ ೪ ರವರೆಗೆ ಸಮಾವೇಶ

> "And will not God bring about justice for his chosen ones, who cry out to him day and night? Will he keep putting them off ? I tell you, he will see that they get justice, and quickly." - Luke 18:7-8

### ಉದ್ದೇಶಗಳು




೧. ಜಗದ್ಗುರು ಫ್ರಾನ್ಸಿಸ್ ಮತ್ತು ಸುವಾರ್ತೆ ಸಾರುವ ಎಲ್ಲರೂ, ಭಗವಂತನಲ್ಲಿ ಸಂಪೂರ್ಣ ಶರಣಾಗತಿ ಮತ್ತು ಬದ್ಧರಾಗಿರಲು ಮಾತೆ ಮರಿಯಳನ್ನು ಅನುಕರಿಸಲು ನಾವು ಪ್ರಾರ್ಥಿಸೋಣ.




೨. ಎಲ್ಲಾ ವರ್ಗದ ಜನರು ಒಬ್ಬರಿಗೊಬ್ಬರು ಸಹೋದರ ಕಾಳಜಿ ಮತ್ತು ಕರುಣೆ ಇರಲಿ ಎಂದು ನಾವು ಪ್ರಾರ್ಥಿಸೋಣ.




೩. ಎಲ್ಲಾ ವಿಶ್ವಾಸಿಗಳು ವಾಕ್ಯ ಮನುಷ್ಯ ರೂಪ ಪಡೆದ ಯೇಸುವಿನ ಸಾಕ್ಷಿಗಳಾಗಬೇಕೆಂದು ನಾವು ಪ್ರಾರ್ಥಿಸೋಣ.




೪. ಎಲ್ಲಾ ಹೆತ್ತವರು ತಮ್ಮ ಮಕ್ಕಳನ್ನು ಅನುಗ್ರಹದ ಜೀವನಕ್ಕೆ ಒಪ್ಪಿಸಿ ದೇವರ ಮಕ್ಕಳಂತೆ ಬೆಳೆಸಬೇಕೆಂದು ನಾವು ಪ್ರಾರ್ಥಿಸೋಣ.




೫. ಕ್ರೈಸ್ತ ಪೋಷಕರು ತಮ್ಮ ಮಕ್ಕಳನ್ನು ದೇವರ ರಾಜ್ಯದ ಸಕ್ರಿಯ ಸಾಕ್ಷಿಗಳಾಗಲು ನಡೆ ಮತ್ತು ನುಡಿಯಲ್ಲಿ ಪ್ರೇರೇಪಿಸುವಂತೆ ನಾವು ಪ್ರಾರ್ಥಿಸೋಣ.




೬. ಪವಿತ್ರಾತ್ಮ ಮತ್ತು ನೀರಿನಿಂದ ಹೊಸ ಜನ್ಮ ಪಡೆದ ಹೊಸದಾಗಿ ದೀಕ್ಷಾಸ್ನಾನ ಪಡೆದವರಿಗಾಗಿ ಪ್ರಾರ್ಥಿಸೋಣ ಇವರೆಲ್ಲರೂ ದೇವರ ನಿಜವಾದ ಮಕ್ಕಳಾಗಿ ಬಾಳುವಂತೆ ಪ್ರಾರ್ಥಿಸೋಣ.




೭. ಎಲ್ಲಾ ಯುವಜನರು ನಿಜವಾದ ಮತ್ತು ಪವಿತ್ರ ಪ್ರೀತಿಯಿಂದ ಲಗ್ನ ಸಂಸ್ಕಾರದಲ್ಲಿ ಒಂದಾಗುವಂತೆ ಪ್ರಾರ್ಥಿಸೋಣ.




೮. ದೀಕ್ಷಾಸ್ನಾನ ಪಡೆದ ಪ್ರತಿಯೊಬ್ಬ ಕ್ರೈಸ್ತನು, ಶುಭಸಂದೇಶವನ್ನು ತನ್ನ ಜೀವನದ ಸಾಕ್ಷಿ ಸಾರುವ ತನ್ನ ಕರ್ತವ್ಯವನ್ನು ಅರಿತುಕೊಳ್ಳಲು ಪ್ರಾರ್ಥಿಸೋಣ.




೯. ಎಲ್ಲಾ ಕ್ರೈಸ್ತರು, ವಲಸಿಗರು ಮತ್ತು ನಿರಾಶ್ರಿತರಲ್ಲಿ ಕ್ರಿಸ್ತನ ರೂಪವನ್ನು ನೋಡಿ ಅವರ ಅಗತ್ಯಗಳನ್ನು ಪೂರೈಸಬೇಕೆಂದು ನಾವು ಪ್ರಾರ್ಥಿಸೋಣ.




೧೦. ಪರಮ ಪ್ರಸಾದ ಸ್ವೀಕರಿಸುವವರೆಲ್ಲರೂ ಬಲಿಪೂಜೆಯಲ್ಲಿ ಯೇಸುವಿನ ನೈಜ ಉಪಸ್ಥಿತಿಯಲ್ಲಿ ಅತ್ಯಂತ ಭಕ್ತಿ ಮತ್ತು ವಿಶ್ವಾಸದೊಂದಿಗೆ ಸಂಸ್ಕಾರವನ್ನು ಪಡೆಯಲು ಪ್ರಾರ್ಥಿಸೋಣ.

೧೧. ವಿವಿಧ ಸಮಸ್ಯೆಗಳು ಮತ್ತು ಯಾತನೆಗಳಿಂದ ಬಳಲುತ್ತಿರುವ ಎಲ್ಲರೂ ಯೇಸುವಿನ ಯಾತನೆಯಲ್ಲಿ ಸಾಂತ್ವನ ಮತ್ತು ಶಕ್ತಿಯನ್ನು ಕಂಡುಕೊಳ್ಳುವಂತೆ ಪ್ರಾರ್ಥಿಸೋಣ.

೧೨. ಬಡವರು ಮತ್ತು ದುರ್ಬಲರಿಗೆ ನ್ಯಾಯಾಲಯದಲ್ಲಿ ನ್ಯಾಯ ಮತ್ತು ಸಾಮಾಜಿಕ ಘನತೆ ಲಭಿಸಲಿ ಎಂದು ಪ್ರಾರ್ಥಿಸೋಣ.

೧೩. ಹಾನಿಕಾರಕ ಅಭ್ಯಾಸಗಳು ಮತ್ತು ವ್ಯಸನಗಳ ಪ್ರಭಾವದಲ್ಲಿರುವ ಯುವಜನರಿಗೆ ಅವರು ಹೊಸ ಜೀವನ ವಿಧಾನಗಳನ್ನು ಅಳವಡಿಸಿಕೊಳ್ಳಲು ವಿಮೋಚಕರಾದ ಯೇಸುವನ್ನು ನೋಡಬೇಕೆಂದು ನಾವು ಪ್ರಾರ್ಥಿಸೋಣ.

೧೪. ಉದ್ಯೋಗವಿಲ್ಲದವರು, ಮನೆಯಿಲ್ಲದವರು ಮತ್ತು ಭಾರೀ ಸಾಲಗಳಿಂದ ಹೊರೆಯಾದವರಿಗೆ, ವಿಶೇಷವಾಗಿ ಬಡ ರೈತರಿಗೆ, ಸರ್ಕಾರದಿಂದ ಪರಿಹಾರ ಮತ್ತು ಪುನರ್ವಸತಿ ಸಿಗಲಿ ಎಂದು ನಾವು ಪ್ರಾರ್ಥಿಸೋಣ.

೧೫. ವಿಶ್ವಾಸಕ್ಕಾಗಿ ಕಿರುಕುಳಕ್ಕೊಳಗಾದವರು ಶಿಲುಬೆಗೇರಿಸಿದ ಯೇಸುವಿನ ಕಡೆಗೆ ನೋಡಿ ಕೃಪೆ ಮತ್ತು ಆಶೀರ್ವಾದದವನ್ನು ಅನುಭವಿಸಲು ನಾವು ಪ್ರಾರ್ಥಿಸೋಣ.

೧೬. ಅಗಲಿದ ಆತ್ಮಗಳು ದೈವಿಕ ಕರುಣೆ ಮತ್ತು ವಿಮೋಚನೆಯ ಪೂರ್ಣತೆಯನ್ನು ಪಡೆಯಬೇಕೆಂದು ನಾವು ಪ್ರಾರ್ಥಿಸೋಣ.

೧೭. ಸಾವಿನ ಹಾಸಿಗೆ ಮೇಲೆ ಇರುವವರು ತಮ್ಮ ಪಾಪಗಳಿಗೆ ಕ್ಷಮೆ ಅನುಭವಿಸಲು ಮತ್ತು ಶಾಂತಿಯಿಂದ ಶಾಶ್ವತ ಮನೆಗೆ ತಲುಪಲು ನಾವು ಪ್ರಾರ್ಥಿಸೋಣ.

೧೮. ಸತ್ಯವನ್ನು ಹುಡುಕುವ ಎಲ್ಲರಿಗೂ ಪವಿತ್ರಾತ್ಮರ ವರದಾನಗಳು ಮತ್ತು ಫಲಗಳು ಲಭಿಸಲೆಂದು ಪ್ರಾರ್ಥಿಸೋಣ.

೧೯. ತಾತ್ಕಾಲಿಕ ಸರಕುಗಳ ಎಲ್ಲಾ ಮೇಲ್ವಿಚಾರಕರು ಅಥವಾ ನಿರ್ವಾಹಕರಿಗಾಗಿ ನಾವು ಪ್ರಾರ್ಥಿಸುತ್ತೇವೆ. ಮಾತೆ ಮರಿಯಳ ಮಧ್ಯಸ್ಥಿಕೆಯ ಮೂಲಕ, ಅವರು ತಮ್ಮ ಆರೈಕೆಗೆ ವಹಿಸಲಾಗಿರುವ ತಾತ್ಕಾಲಿಕ ಸರಕುಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳಬೇಕೆಂದು ನಾವು ಪ್ರಾರ್ಥಿಸೋಣ.

೨೦. ಜಪಸರ ಸರಪಳಿ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ, ದೈನಂದಿನ ಸವಾಲುಗಳ ಮಧ್ಯೆ ಜೀವನದಲ್ಲಿ ಅರ್ಥವನ್ನು ಕಂಡುಕೊಳ್ಳಲು ಮತ್ತು ಅಂತಿಮವಾಗಿ ಸ್ವರ್ಗದಲ್ಲಿರುವ ತಾಯಿಯ ಮರಿಯಳ ಮಹಿಮೆಯಲ್ಲಿ ಪಾಲ್ಗೊಳ್ಳುವಂತೆ ನಾವು ಪ್ರಾರ್ಥಿಸುತ್ತೇವೆ.


**The Director**

**Mary Matha Shrine Ross Hill,**


**Visakhapatnam-01 , A.P., India**

chainrosaryprayer@gmail.com,

PH : 0891 -2562318, Cell : 9573709412

www.rosarychainprayer.com

www.rosshillshrine.org


# ಜಪಸರ ಸರಪಳಿ

2019

